# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯಃ ಸೇವೆಯಲ್ಲಿ ಒಂದೂ ಪದೋನ್ನತಿ ಇಲ್ಲದ 20 ವರ್ಷಗಳು ಅದೇ ಹುದ್ದೆಯಲ್ಲಿರುವ ಸರ್ಕಾರಿ ನೌಕರರಿಗೆ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

\- - -

**ಪ್ರಸ್ತಾವನೆಃ**

ಮಾನ್ಯ ಮುಖ್ಯ ಮಂತ್ರಿಗಳು 2002-2003ನೇ ಸಾಲಿನ ಆಯವ್ಯಯ ಭಾಷಣದಲ್ಲಿ ರಾಜ್ಯ ವೇತನ ಶ್ರೇಣಿಗಳಲ್ಲಿನ ಮೊದಲ ಹನ್ನೊಂದು ವೇತನ ಶ್ರೇಣಿಗಳಲ್ಲಿ ಹುದ್ದೆಗಳನ್ನು ಹೊಂದಿದ್ದು 20 ವರ್ಷಗಳ ಸೇವಾವಧಿಯಲ್ಲಿ ಒಂದೂ ಪದೋನ್ನತಿಯನ್ನು ಪಡೆಯದ ಸರ್ಕಾರಿ ನೌಕರರಿಗೆ ದಿನಾಂಕ 1-4-2002 ರಿಂದ ಅನ್ವಯವಾಗುವಂತೆ ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡುವ ಸರ್ಕಾರದ ತೀರ್ಮಾನವನ್ನು ಪ್ರಕಟಿಸಿರುತ್ತಾರೆ. ತದನುಸಾರ ಈ ಕೆಳಕಂಡ ಆದೇಶಗಳನ್ನು ಹೊರಡಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆಃ ಎಫ್‌ಡಿ 13 ಎಸ್‌ಆರ್‌ಪಿ 2002, ಬೆಂಗಳೂರು, ದಿನಾಂಕಃ 9ನೇ ಮೇ 2002.

ಕಂಡಿಕೆ 6(ii) ರಲ್ಲಿ ನಮೂದಿಸಲಾಗಿರುವ ನೌಕರರನ್ನು ಹೊರತುಪಡಿಸಿ ರಾಜ್ಯ ವೇತನ ಶ್ರೇಣಿಗಳಲ್ಲಿ ಈ ಕೆಳಗೆ ನಮೂದಿಸಿರುವ ಮೊದಲ ಹನ್ನೊಂದು ವೇತನ ಶ್ರೇಣಿಗಳಲ್ಲಿ ಯಾವುದೇ ಒಂದು ಹುದ್ದೆಯಲ್ಲಿ ಇಪ್ಪತ್ತು ವರ್ಷಗಳ ಅವಧಿಯಲ್ಲಿ ಒಂದೂ ಪದೋನ್ನತಿ ಪಡೆಯದೆ ಮುಂದುವರೆದಿರುವ ಅಥವಾ ಮುಂದುವರೆಯುವ ಸರ್ಕಾರಿ ನೌಕರನಿಗೆ ಆ ಹುದ್ದೆಗೆ ನಿಗಧಿಪಡಿಸಲಾದ ವೇತನ ಶ್ರೇಣಿಯಲ್ಲಿ ಅಥವಾ ಅವನು ಹೊಂದಿರುವ ಆಯ್ಕೆಕಾಲಿಕ ವೇತನ ಶ್ರೇಣಿಯಲ್ಲಿ ಅಥವಾ ಹಿರಿಯ ವೇತನ ಶ್ರೇಣಿಯಲ್ಲಿ, ಆಯಾ ಪ್ರಕರಣಕ್ಕನ್ವಯ, ಒಂದು ಹೆಚ್ಚುವರಿ ವೇತನ ಬಡ್ತಿಯನ್ನು ದಿನಾಂಕ 1-4-2002 ರಿಂದ ಜಾರಿಗೆ ಬರುವಂತೆ ಅಥವಾ ಇಪ್ಪತ್ತು ವರ್ಷಗಳ ಸೇವೆ ಪೂರ್ಣಗೊಳಿಸಿದ ದಿನಾಂಕದಿಂದ, ಇದರಲ್ಲಿ ಯಾವುದು ನಂತರವೋ ಆ ದಿನಾಂಕದಿಂದ ಮಂಜೂರು ಮಾಡತಕ್ಕದ್ದು.

| ಕ್ರ.ಸಂ. | ವೇತನ ಶ್ರೇಣಿ |
|---|---|
| 1 | 2 |
| 1 | 2500-3850 |
| 2 | 2600-4350 |
| 3 | 2775-4950 |
| 4 | 3000-5450 |
| 5 | 3300-6300 |
| 6 | 3850-7050 |
| 7 | 4150-7800 |
| 8 | 4575-8400 |
| 9 | 5200-9580 |
| 10 | 5575-10620 |
| 11 | 6000-11200 |

## ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಹಾಗೂ ಅರ್ಹತಾ ಷರತ್ತುಗಳು:

2. ಈ ಕೆಳಕಂಡ ಷರತ್ತುಗಳನ್ನು ಪೂರೈಸಿದಲ್ಲಿ ನೇಮಕಾತಿ ಪ್ರಾಧಿಕಾರವೇ ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಮಂಜೂರು ಮಾಡಲು ಅಧಿಕಾರ ಹೊಂದಿರುತ್ತದೆ:

ಅ) ನೌಕರನು ತೃಪ್ತಿಕರ ಸೇವಾ ದಾಖಲೆ ಹೊಂದಿರಬೇಕು; ತೃಪ್ತಿಕರ ಸೇವೆಯನ್ನು ಜೇಷ್ಠತೆ ಹಾಗೂ ಅರ್ಹತೆ ಆಧಾರದ ಮೇಲೆ ಪದೋನ್ನತಿಗೆ ಅರ್ಹತೆ ನಿರ್ಧರಿಸುವ ರೀತಿಯಲ್ಲಿಯೇ ನಿರ್ಧರಿಸತಕ್ಕದು.

ಆ) ಆ ಹುದ್ದೆಗೆ ನೇಮಕಾತಿ ನಿಯಮಗಳಲ್ಲಿ ಪದೋನ್ನತಿಗೆ ಅವಕಾಶ ಕಲ್ಪಿಸಿರುವಲ್ಲಿ, ಪದೋನ್ನತಿಗಾಗಿ ನಿಗಧಿಪಡಿಸಿರುವ ಅರ್ಹತೆಯನ್ನು ಅವರು ಹೊಂದಿರಬೇಕು. ಆದಾಗ್ಯೂ, ಈ ಕೆಳಕಂಡಂತೆ ಸಡಿಲಿಕೆ ಕಲ್ಪಿಸಿದೆ:

(1) ಮೇಲಿನ ಹುದ್ದೆಗೆ ಪದೋನ್ನತಿಗೆ ಶೈಕ್ಷಣಿಕ ಅಥವಾ ವೃತ್ತೀಯ ವಿದ್ಯಾರ್ಹತೆ ನಿಗಧಿಪಡಿಸಿರುವಲ್ಲಿ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗೆ ಆ ಅರ್ಹತೆಯನ್ನು ಪಡೆದಿರಲೇಬೇಕೆಂದು ಒತ್ತಾಯಿಸಬಾರದು. ಆದರೆ ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ಸರ್ಕಾರಿ ನೌಕರನು ತಾನು ಹೊಂದಿರುವ ಹುದ್ದೆಗೆ ನಿಗಧಿಪಡಿಸಿರುವ ಕನ್ನಡ ಭಾಷಾ ಪರೀಕ್ಷೆ ಮತ್ತು ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣನಾಗಿರಲೇಬೇಕು.

(2) ಗ್ರೂಪ್-ಡಿ ನೌಕರರಿಗೆ ಸಂಬಂಧಿಸಿದಂತೆ, ಶೈಕ್ಷಣಿಕ ವಿದ್ಯಾರ್ಹತೆ ಪಡೆದಿರಬೇಕೆಂದು ಅಥವಾ ಕನ್ನಡ ಭಾಷಾ ಪರೀಕ್ಷೆ ಅಥವಾ ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಸೇವಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

(3) ವಾಹನ ಚಾಲಕರಿಗೆ ಸಂಬಂಧಿಸಿದಂತೆ ಎಸ್.ಎಸ್.ಎಲ್.ಸಿ. ಶೈಕ್ಷಣಿಕ ವಿದ್ಯಾರ್ಹತೆ ಮತ್ತು ಪದೋನ್ನತಿಗಾಗಿ ನಿಗಧಿಪಡಿಸಿರುವ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರಲೇ ಬೇಕೆಂದು ಒತ್ತಾಯಿಸಬಾರದು.

## ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಉದ್ದೇಶಕ್ಕಾಗಿ ಗಣನೆಗೆ ತೆಗೆದುಕೊಳ್ಳಬೇಕಾದ ಸೇವೆ:

3. ಈ ಕೆಳಗಿನ ಸೇವೆಯನ್ನು ಹೊರತುಪಡಿಸಿ ಒಬ್ಬ ಸರ್ಕಾರಿ ನೌಕರನು `ತಾನು ಹೊಂದಿರುವ ಹುದ್ದೆಯಲ್ಲಿ 20 ವರ್ಷಗಳಿಗೆ ಕಡಿಮೆ ಇಲ್ಲದಂತೆ ಸತತ ಸೇವೆ ಸಲ್ಲಿಸಿರಬೇಕು.

(i) ಸ್ಥಳೀಯ ಅಭ್ಯರ್ಥಿ ಸೇವೆ.
(ii) ಕಾರ್ಯಭೃತ ಸಿಬ್ಬಂದಿ ಸೇವೆ.
(iii) ವೃಂದ ಅಥವಾ ಹುದ್ದೆ ಬದಲಾವಣೆಯ ಪರಿಣಾಮವಾಗಿ ಯಾವುದೇ ಇಲಾಖೆ ಅಥವಾ ಸೇವೆಯಲ್ಲಿ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿತವಾಗದ ಒಂದು ಇಲಾಖೆಯ ಹಿಂದಿನ ಹುದ್ದೆ ಅಥವಾ ವೃಂದದಲ್ಲಿ ಸಲ್ಲಿಸಿದ ಸೇವೆ; ಮತ್ತು
(iv) ಒಂದೇ ಹುದ್ದೆಯಲ್ಲಿ 20 ವರ್ಷಗಳ ಸೇವೆಯನ್ನು ಲೆಕ್ಕ ಮಾಡುವಾಗ ಪದೋನ್ನತಿಗಾಗಿ ಜೇಷ್ಠತೆಯನ್ನು ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡದ ಇತರ ಯಾವುದೇ ಸೇವೆ.

<u>ಟಿಪ್ಪಣಿ:</u> ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿಗಾಗಿ ನಿಗಧಿತ ಸೇವೆಯನ್ನು ಎಣಿಕೆ ಮಾಡುವಾಗ ಕಾಲಕಾಲಕ್ಕೆ ಜಾರಿಯಲ್ಲಿರುವ ಕರ್ನಾಟಕ ಸರ್ಕಾರಿ ನೌಕರರ (ಜೇಷ್ಠತೆ) ನಿಯಮಾವಳಿ, 1957 ರನ್ವಯ ಜೇಷ್ಠತೆ ನಿರ್ಧರಿಸುವ ಉದ್ದೇಶಕ್ಕೆ ಪರಿಗಣಿಸಲ್ಪಡುವ ಸೇವೆಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

ಹೆಚ್ಚುವರಿ ವೇತನ ಬಡ್ತಿಯ ದರ:

4. ಹೆಚ್ಚುವರಿ ವೇತನ ಬಡ್ತಿಯನ್ನು ಈ ಕೆಳಕಂಡಂತೆ ಪಾವತಿ ಮಾಡಿ ಕ್ರಮಗೊಳಿಸತಕ್ಕದ್ದು:

(i) ಹೆಚ್ಚುವರಿ ವೇತನ ಬಡ್ತಿಯನ್ನು ಸರ್ಕಾರಿ ನೌಕರನು ಹೊಂದಿರುವ ವೇತನ ಶ್ರೇಣಿಯಲ್ಲಿ ಅವನಿಗೆ ಲಭ್ಯವಾಗುವ ಮುಂದಿನ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ನೀಡತಕ್ಕದ್ದು.

(ii) ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತವನ್ನು ತಲುಪಿದ್ದಲ್ಲಿ ಅಥವಾ ಅವನಿಗೆ ಸ್ಥಗಿತ ವೇತನ ಬಡ್ತಿ/ಬಡ್ತಿಗಳನ್ನು ಮಂಜೂರು ಮಾಡಿದ್ದಲ್ಲಿ, ಹೆಚ್ಚುವರಿ ವೇತನ ಬಡ್ತಿಯನ್ನು ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರದಲ್ಲಿ ಕಾಲಿಕ ವೇತನ ಶ್ರೇಣಿಯ ಗರಿಷ್ಠ ಹಂತ ಮೀರಿ ಮಂಜೂರು ಮಾಡತಕ್ಕದ್ದು ಮತ್ತು ಅದನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

(iii) ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿದ ಪರಿಣಾಮವಾಗಿ ಸರ್ಕಾರಿ ನೌಕರನು ಕಾಲಿಕ ವೇತನ ಶ್ರೇಣಿಯಲ್ಲಿ ಗರಿಷ್ಠ ಹಂತ ತಲುಪಿದಲ್ಲಿ, ಅವನು ಕಡೆಯದಾಗಿ ಪಡೆದ ವಾರ್ಷಿಕ ವೇತನ ಬಡ್ತಿಯ ದರಕ್ಕೆ ಸಮನಾಗಿ ವಾರ್ಷಿಕ ವೇತನ ಬಡ್ತಿಯನ್ನು ಕಾಲಿಕ ವೇತನ ಶ್ರೇಣಿಯಲ್ಲಿ ಅದು ಬಾಕಿ ಇರುವ ದಿನಾಂಕದಿಂದ ಪಡೆಯಲು ಹಕ್ಕುಳ್ಳವನಾಗಿರುತ್ತಾನೆ ಮತ್ತು ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯನ್ನು 'ವೈಯಕ್ತಿಕ ವೇತನ' ಎಂದು ಪರಿಗಣಿಸತಕ್ಕದ್ದು.

ಟಿಪ್ಪಣಿ: ಈ ಆದೇಶದನ್ವಯ ಮಂಜೂರು ಮಾಡಲಾದ ಹೆಚ್ಚುವರಿ ವೇತನ ಬಡ್ತಿಯ ಪರಿಣಾಮದಿಂದ ಉದ್ಭವಿಸಿದ 'ವೈಯಕ್ತಿಕ ವೇತನ'ವನ್ನು ವೇತನ ಶ್ರೇಣಿಗಳ ಪರಿಷ್ಕರಣೆ ಮತ್ತು ಪದೋನ್ನತಿ ನಂತರದ ವೇತನ ನಿಗದಿ ಸೇರಿದಂತೆ ಎಲ್ಲಾ ಉದ್ದೇಶಗಳಿಗೆ ಮೂಲ ವೇತನ ಎಂದು ಪರಿಗಣಿಸತಕ್ಕದ್ದು.

ಹೆಚ್ಚುವರಿ ವೇತನ ಬಡ್ತಿ ಮಂಜೂರಾತಿ ಒಂದು ಬಾರಿ ಮಾತ್ರ:

5. ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿಯನ್ನು ಸರ್ಕಾರಿ ನೌಕರನು ಸರ್ಕಾರದಲ್ಲಿ ಸಲ್ಲಿಸುವ ತನ್ನ ಇಡೀ ಸೇವಾ ಅವಧಿಯಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ಪಡೆಯಲು ಅರ್ಹನಾಗುವುದಿಲ್ಲ.

ಅನ್ವಯಿಸುವಿಕೆ:

6 (i) ಕಂಡಿಕೆ 2 ರಲ್ಲಿರುವ ಉಪಬಂಧಗಳಿಗೆ ಒಳಪಟ್ಟು, ಈ ಆದೇಶಗಳು ಯಾರ ಸೇವಾ ಷರತ್ತುಗಳು ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಗಳ ಉಪಬಂಧಗಳಿಗೆ ಒಳಪಡುತ್ತವೋ ಆ ಎಲ್ಲಾ ಸರ್ಕಾರಿ ನೌಕರರಿಗೂ ಅನ್ವಯವಾಗುತ್ತವೆ.

6 (ii) ಈ ಆದೇಶಗಳು ಇವರಿಗೆ ಅನ್ವಯವಾಗತಕ್ಕದ್ದಲ್ಲ:

(ಅ) ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಪ್ರಾಥಮಿಕ/ಪ್ರೌಢ ಶಾಲೆಗಳ ಎಲ್ಲಾ ವರ್ಗದ ಶಿಕ್ಷಕರು ಮತ್ತು ಪದವಿಪೂರ್ವ ಕಾಲೇಜುಗಳ (ಕಿರಿಯ ಕಾಲೇಜುಗಳ) ಉಪನ್ಯಾಸಕರುಗಳಿಗೆ.

(ಆ) ಈಗಾಗಲೇ ಕನಿಷ್ಠ ಒಂದು ಪದೋನ್ನತಿ ಪಡೆದಿರುವ ಸರ್ಕಾರಿ ನೌಕರರಿಗೆ.

(ಇ) ಕಾರ್ಯಭೃತ ಸಿಬ್ಬಂದಿ ವರ್ಗಕ್ಕೆ ಸೇರಿದವರಿಗೆ.

(ಈ) ಸಾದಿಲ್ವಾರು ನಿಧಿಯಿಂದ ಸಂಬಳ ನೀಡಲಾಗುತ್ತಿರುವವರಿಗೆ.

(ಉ) ಸ್ಥಳೀಯ ಅಭ್ಯರ್ಥಿಗಳಾಗಿ ನೇಮಕಾತಿಗೊಂಡವರಿಗೆ.
(ಊ) ಸಂಚಿತ ವೇತನ ಅಥವಾ ಅರೆಕಾಲಿಕ ಆಧಾರದ ಮೇರೆಗೆ ನೇಮಕಾತಿಗೊಂಡವರಿಗೆ.
(ಋ) ಸ್ವಇಚ್ಛೆಯಿಂದ ತಮ್ಮ ಪದೋನ್ನತಿಯನ್ನು ಬಿಟ್ಟುಕೊಟ್ಟ ಸರ್ಕಾರಿ ನೌಕರರಿಗೆ.
(ೠ) ಸರ್ಕಾರವು, ತನ್ನ ಆದೇಶದ ಮುಖಾಂತರ, ಈ ಆದೇಶಗಳ ಕಾರ್ಯಾಚರಣೆಯಿಂದ ನಿರ್ದಿಷ್ಟವಾಗಿ ಹೊರತುಪಡಿಸಬಹುದಾದ ಯಾವುದೇ ಇತರ ವರ್ಗ ಅಥವಾ ಪ್ರವರ್ಗದ ವ್ಯಕ್ತಿಗಳಿಗೆ.

7. ಈ ಆದೇಶಗಳು 2002ರ ಏಪ್ರಿಲ್ ಒಂದನೇ ದಿನಾಂಕದಿಂದ ಜಾರಿಗೆ ಬಂದಿರುತ್ತದೆ.

8. ಈ ಆದೇಶದನ್ವಯ ಹೆಚ್ಚುವರಿ ವೇತನ ಬಡ್ತಿ ಮಂಜೂರು ಮಾಡಿ ಹೊರಡಿಸಿದ ಆದೇಶದ ಪ್ರತಿಯನ್ನು ಆರ್ಥಿಕ ಇಲಾಖೆ (ಸೇವೆಗಳು-2) ಮತ್ತು ಸಂಬಂಧಿಸಿದ ಆಡಳಿತ ಇಲಾಖೆಯ ಸರ್ಕಾರದ ಕಾರ್ಯದರ್ಶಿಯವರಿಗೆ ಕಳುಹಿಸಿ ಕೊಡತಕ್ಕದ್ದು.

ರಾಜ್ಯಪಾಲರ ಆಜ್ಞಾನುಸಾರ ಮತ್ತು
ಅವರ ಹೆಸರಿನಲ್ಲಿ,

(ಕೆ.ಆರ್.ರಾಮದುರ್ಗ್)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು-2).

ಇವರಿಗೆ,

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು /ಪ್ರಧಾನ ಕಾರ್ಯದರ್ಶಿಗಳು /ಕಾರ್ಯದರ್ಶಿಗಳು.
2. ವಿಭಾಗಾಧಿಕಾರಿಗಳು.
3. ಇಲಾಖಾ ಮುಖ್ಯಸ್ಥರುಗಳು.
4. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
5. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
6. ಮಹಾಲೇಖಪಾಲರು(ಲೆಕ್ಕಪತ್ರ/ಲೆಕ್ಕಪರಿಶೋಧನೆ)(ಜಿ.ಎಂ.ಶಾಖೆ), ಕರ್ನಾಟಕ, ಬೆಂಗಳೂರು.
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು.
8. ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು.
9. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ/ವಿಧಾನ ಪರಿಷತ್ತು, ಬೆಂಗಳೂರು.
11. ರಿಜಿಸ್ಟ್ರಾರ್, ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು.
12. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
13. ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಪ್ರಕಟಣೆಯಲ್ಲಿ ಪ್ರಕಟಿಸುವುದಕ್ಕಾಗಿ.
14. ಕರ್ನಾಟಕ ಸರ್ಕಾರ ಸಚಿವಾಲಯದ ಎಲ್ಲಾ ಶಾಖೆಗಳು.
15. ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಕಬ್ಬನ್ ಉದ್ಯಾನವನ, ಬೆಂಗಳೂರು.
16. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
17. ವಾರಪತ್ರ.
18. ಶಾಖೆಯ ರಕ್ಷಾ ಕಡತ.

ಕ್ರಮ ಸಂಖ್ಯೆ: 7,8,9,10,11 ಮತ್ತು 12ರಲ್ಲಿ ನಮೂದಿತವಾದ ಅಧಿಕಾರಿಗಳಿಗೆ ಪತ್ರದ ಮೂಲಕ.

ಸರ್ಕಾರಿ ಮುದ್ರಣಾಲಯ, ಪೀಣ್ಯ, ಬೆಂಗಳೂರು - ೫೮

## PROCEEDINGS OF THE GOVERNMENT OF KARNATAKA

Sub: Grant of additional increment to Government Servants who continue in the same post for 20 years without a single promotion in the entire service.

- - -

**PREAMBLE:**

The Hon'ble Chief Minister in the Budget Speech 2002-2003 has announced Government's decision to grant an additional increment to the Government employees holding posts in the first eleven State scales of pay who have put in 20 years of service without a single promotion with effect from 1.4.2002. Accordingly the following orders are issued.

**GOVERNMENT ORDER NO.FD 13 SRP 2002, BANGALORE, DATED: 9th May 2002.**

Government are pleased to order that a Government Servant other than those specified in para 6(ii) holding a post in any of the first eleven State scales of pay specified below who has continued or who continues in the same post for a period of twenty years without a single promotion in the entire service shall be granted an additional increment in the scale of pay of the post held by him or in the Selection time scale of pay or Senior Scale of Pay thereof as the case may be with effect from 1.4.2002 or from the date from which he completes 20 years of service whichever is later.

| Sl. No. | Scale of Pay |
|---|---|
| 1 | 2 |
| 1 | 2500-3850 |
| 2 | 2600-4350 |
| 3 | 2775-4950 |
| 4 | 3000-5450 |
| 5 | 3300-6300 |
| 6 | 3850-7050 |
| 7 | 4150-7800 |
| 8 | 4575-8400 |
| 9 | 5200-9580 |
| 10 | 5575-10620 |
| 11 | 6000-11200 |

**Grant of additional increment and conditions of eligibility:**

2. The Appointing Authority is the authority competent to sanction Additional increment under this order, if,

a) he has satisfactory record of service; the satisfactory record of service shall be determined in the same manner as merit is determined for promotion on the basis of seniority-cum-merit;

b) he is qualified and eligible for promotion in accordance with the rules of recruitment applicable to the post where there is avenue of promotion. However, the following relaxations are made:-

(i) Where the acquisition of academic or professional qualifications are prescribed for promotion to the higher post, the same shall not be insisted upon for grant of additional increment. The passing of the Kannada Language examination and service examination prescribed for the post held by the Government Servant should however be insisted upon for grant of additional increment.

(ii) In respect of Group-D employees possession of an academic qualification or the passing of the Kannada Language or any service examination prescribed for promotion shall not be insisted upon.

(iii) In respect of Drivers the academic qualification of SSLC and passing of departmental tests prescribed for the promotional post shall not be insisted upon.

**Computation of service for the purpose of grant of Additional increment:-**

3. A Government Servant must have put in a continuous service of not less than 20 years of service in the post held by him excluding his service:-

(i) as local candidate,
(ii) in work charged establishment,
(iii) rendered in the former post or cadre in a Department or service consequent on the change in the post or cadre in a Department or service which does not count for the purpose of determining seniority for promotion; and
(iv) in any other service which does not count for the purpose of determining seniority for promotion in computing the period of 20 years service in the same post.

Note:- Only service which will be taken into account for the purpose of determination of seniority under the Karnataka Government Servants' (Seniority) Rules, 1957 as in force from time to time, shall be counted in computing the service prescribed for grant of additional increment.

**The rate of additional increment:**

4. The payment of additional increment admissible shall be regulated as follows:

(i) The additional increment shall be granted at the rate of next increment admissible in the time scale of pay held by the Government Servant.

(ii) Where a Government Servant has reached the maximum of the time scale of pay or has been sanctioned Stagnation increment/s, an Additional increment at the rate of Annual Increment last drawn shall be sanctioned beyond the maximum of the time scale of pay and the same shall be treated as "Personal Pay".

(iii) Where a Government Servant has reached the maximum of the time scale of pay consequent on grant of additional increment under this order, he shall be entitled to annual increment on the date on which it is due and the additional increment granted shall be treated as "Personal Pay".

**Note:**

The "Personal Pay" arising out of grant of Additional increment under this order shall be reckoned as basic pay for all purposes including fixation of pay on promotion and on revision of pay scales.

**One time sanction of Additional increment:**

5. No Government Servant shall be eligible for sanction of Additional increment under this order more than once during the entire service under the Government.

**Application:**

6(i). Subject to the provisions of para 2, these orders shall be applicable to all Government Servants whose service conditions are governed by the provisions of the Karnataka Civil Service Rules.

6(ii). **These orders shall not be applicable to-**

a) all categories of Primary/Secondary School Teachers and Lecturers of P.U. College (Junior Colleges) coming under the purview of Education Department.
b) Government Servants who have already got atleast one promotion.
c) persons borne on work charged establishments;
d) persons paid out of contingencies;
e) persons appointed as local candidates;
f) persons appointed on consolidated pay or on part-time basis;
g) Government Servants who have voluntarily forgone their promotion;
h) any other class or category of persons whom the Government may, by order, specifically exclude from the operation of these orders.

7. These orders shall come into force with effect from 1st April 2002.

8. A copy of the order sanctioning Additional increment under this order shall be endorsed to Finance Department (Services-II) and the Secretary of the concerned Administrative Department.

BY ORDER AND IN THE NAME OF THE
GOVERNOR OF KARNATAKA,

(K.R.RAMDURG)
Deputy Secretary to Government
Finance Department (Services-2).

To:

1. All the Additional Chief Secretaries/Principal Secretaries/Secretaries to Government.
2. The Divisional Commissioners.
3. The Heads of Departments.
4. The Deputy Commissioners of Districts.
5. The Chief Executive Officers of Zilla Panchayaths.
6. The Accountant General (Accounts/Audit) (G.M. Branch), Karnataka, Bangalore.
7. The Registrar, High Court of Karnataka, Bangalore.
8. The Secretary, Karnataka Public Service Commission, Bangalore.
9. The Secretary, Karnataka Legislative Assembly/Legislative Council, Bangalore.
10. The Registrar, Karnataka Lokayukta, Bangalore.
11. The Registrar, Karnataka Administrative Tribunal, Bangalore.
12. The Treasury Officer, State Huzur Treasury/District Treasuries.
13. The Senior Research Officer, Pay Research Unit, Department of Expenditure, Ministry of Finance, Government of India, New Delhi.
14. The Compiler, Karnataka Gazette for publication in the next issue of the gazette and to supply 500 copies to Finance Department.
15. The President, Karnataka State Government Employees Association, Bangalore.
16. All Sections of the Karnataka Government Secretariat.
17. Karnataka Government Secretariat Library/Legislature Library.
18. Weekly Gazette.
19. Section Guard File.

Sl. Nos. 7,8.9,10 and 11 with a covering letter.